# ಕರ್ಮಯೋಗ –ಜಗತ್ತಿನ ದಕ್ಷಿಣ ತುದಿಯಲ್ಲಿ

*ಮೂಲ:* ಪೃಥಾಲಾಲ್
*ಅನುವಾದ:*
ರೋಹಿಣಿ ಸುರೇಂದ್ರ

ಪರಿಸರದ ಬಗ್ಗೆ ಬಹು ಹಿಂದೆಯೆ 'ಸಸ್ಯಶಾಮಲಾಂ' ಎಂಬ ಕಿರು ಪುಸ್ತಕವನ್ನು ಬರೆದು ವೃಕ್ಷಾದಿ ಸಸ್ಯ ಸಂಪತ್ತಿನ ತಿಳಿವಳಿಕೆ ನೀಡಿದ ಅನುವಾದಕಿ ಸಸ್ಯಶಾಸ್ತ್ರದ ಸ್ನಾತಕೋತ್ತರ ಪದವೀಧರೆ. ಸ್ವತಃ ಬಿಡಿ ಲೇಖನಗಳನ್ನು ಬರೆದು ಕೆಲವು ಇಂಗ್ಲಿಷ್ ಲೇಖನಗಳನ್ನು ಅನುವಾದ ಮಾಡಿ ಪಳಗಿರುವ ಇವರು ಮೈಸೂರಿನಲ್ಲೇ ಇರುವ ಗೃಹಿಣಿ. ಪ್ರಸ್ತುತ ಲೇಖನವನ್ನು ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ ಪ್ರಬುದ್ಧಭಾರತ ನವೆಂಬರ್ ೨೦೦೬ರ ಸಂಚಿಕೆಯಿಂದ ಅನುವಾದಿಸಲಾಗಿದೆ.

ಈ ಶೀರ್ಷಿಕೆಯಲ್ಲಿ ಬರೆಯಲು ನಾನು ಸರಿಯಾದ ವ್ಯಕ್ತಿ ಅಲ್ಲವೆಂಬುದನ್ನು ಮೊದಲು ನಾನು ಒಪ್ಪಿಕೊಳ್ಳಲೇಬೇಕು. ಏಕೆಂದರೆ ಸುಪ್ರಸಿದ್ಧವಾದ ಕರ್ಮಯೋಗ ತತ್ತ್ವವನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿರುವೆನೆಂದು ಹೇಳಿಕೊಳ್ಳಲಾರೆ. ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿರಬೇಕು, ಪ್ರತಿಯಾಗಿ ಯಾವ ಫಲವನ್ನೂ ನಿರೀಕ್ಷಿಸಬಾರದು ಎಂಬೀ ಮಾತುಗಳನ್ನು ಕೇಳುತ್ತಲೇ ಇರುತ್ತೇವೆ. ಆದರೆ ನಮಗೆ ನಿಜಕ್ಕೂ ಅದರ ಅರ್ಥ ಆಗಿರುವುದಿಲ್ಲ.

ಇವತ್ತು ರಾತ್ರಿ ಟಿ.ವಿ.ಯಲ್ಲಿ "ಪೆಂಗ್ವಿನ್ ಪಕ್ಷಿಗಳ ಪಾದ ಯಾತ್ರೆ" ಎಂಬ ಸುಪ್ರಸಿದ್ಧ ಸಾಕ್ಷ್ಯಚಿತ್ರವನ್ನು ತೋರಿಸುತ್ತಾರೆ. ಅದನ್ನು ನೋಡಲು ಬಹಳ ಹೊತ್ತು ಎದ್ದಿರುವ ನಿರ್ಧಾರ ಮಾಡಿದೆ. ತಮ್ಮ ವಿಶಿಷ್ಟವಾದ ನಡಗೆಯಲ್ಲಿ ಪೆದ್ದುಪೆದ್ದಾಗಿ (ವಿದೂಷಕರಂತೆ) ಕಾಣುವ ಪೆಂಗ್ವಿನ್‌ಗಳು ಅತೀವ ಚಳಿಯ ಕಠೋರ ಹವಾಮಾನವನ್ನು ಸಹಿಸಿಕೊಂಡೂ ಬದುಕಿ, ಉಳಿದು ಬಾಳುವ ಪರಿ ಸೋಜಿಗವನ್ನುಂಟುಮಾಡುವಂತಹದು. ಈ ಪಕ್ಷಿಗಳ ಕೌತುಕಮಯ ಬದುಕನ್ನು ನೋಡುವುದು ಕಲಿಕೆಯ ಅನುಭವ ಮಾತ್ರವಲ್ಲ, ಪಾರಮಾರ್ಥಿಕ ಅನುಭೂತಿಯೂ ಹೌದು.

ಇನ್ನೂ ಹುಟ್ಟದಿರುವ ಪೆಂಗ್ವಿನ್ ಮರಿಯ ತಾಯಿಯೊಂದು ಬಾರಿ, ತಂದೆಯೊಂದು ಬಾರಿ, ಹೀಗೆ ಸರದಿಯ ಮೇಲೆ ತನ್ನ ಸಂಗಾತಿಗೆ ಮತ್ತು ಜನಿಸಲಿರುವ ಮರಿಗೆ ಆಹಾರವನ್ನು ತರುವುದಕ್ಕಾಗಿ ಮೊಟ್ಟೆಯಿಡುವ ಗೂಡಿನಿಂದ ಎಪ್ಪತ್ತು ಮೈಲಿ ದೂರದ ಸಮುದ್ರದೆಡೆಗೆ ಹಲವಾರು ಬಾರಿ ನಡೆದುಕೊಂಡು ಹೋಗಿಬರುವುದು ಮೋಹಕವಾದ, ಹಾಗೆಯೆ ಹೃದಯಂಗಮವಾದ ದೃಶ್ಯ! ಅಂಟಾರ್ಕ್‌ಟಿಕಾದ ಹಿಮಗಡ್ಡೆಗಳ ಮೇಲೆ ಹೆಪ್ಪುಗಟ್ಟಿದ ಚಳಿಯಲ್ಲಿ ತಾಯಿ ಅಥವಾ ತಂದೆ ಪೆಂಗ್ವಿನ್ ಆಹಾರಾನ್ವೇಷಣೆಗೆ ತೆರಳಿದಾಗ ಉಳಿದ ಪೆಂಗ್ವಿನ್ ಕುಟುಂಬಗಳೆಲ್ಲ ಒಟ್ಟಾಗಿ ತೆಕ್ಕೆ ಹಾಕಿಕೊಂಡಂತೆ ನಿಂತು ಮೈಶಾಖವನ್ನು ಕಾಪ್ಪುಕೊಳ್ಳುವುದು ಒಂದು ಹೃದಯಸ್ಪರ್ಶಿ ನೋಟ! ಆಹಾರದೊಂದಿಗೆ ಹಿಂತಿರುಗಿ ಬಂದ ಪೆಂಗ್ವಿನ್‌ಗಳು ಗರ್ಗರವಾಗಿ ಶಬ್ದ ಮಾಡುತ್ತ ಆ ಪಕ್ಷಿಸಂದಣಿಯಲ್ಲಿ ತಮ್ಮ ತಮ್ಮ



ಕುಟುಂಬದವರನ್ನು ಹುಡುಕಿ ಪತ್ತೆ ಹಚ್ಚುವುದಂತೂ ಮಾನವ ವರ್ತನೆಯಂತೇ ಇರುತ್ತದೆ; ನೋಡಲು ಬಹಳ ತಮಾಷೆಯಾಗಿರುತ್ತದೆ.

ತಂದೆ ಆಹಾರ ತರಲು ಹೋದಾಗ ತಾಯಿ ಪೆಂಗ್ವಿನ್, ತಾಯಿ ಆಹಾರ ತರಲು ಹೋದಾಗ ತಂದೆ ಪೆಂಗ್ವಿನ್ ಹೀಗೆ ಸರದಿಯ ಮೇಲೆ ತಮ್ಮ ಗೂಡಿಗೆ ಕಾವಲಾಗಿರುತ್ತವೆ. ಮೊದಲು ಮೊಟ್ಟೆಯ ರಕ್ಷಣೆ—ನಂತರ ಅದನ್ನೊಡೆದು ಬಂದ ಎಳೆಯ ಮರಿಯ ರಕ್ಷಣೆ—ಹಿಮಮಾರುತಗಳಿಂದ, ಬೇಟೆಹಕ್ಕಿಗಳಿಂದ ಮತ್ತು ತಮ್ಮದೇ ಬಳಗದ ಒಳಶತ್ರುಗಳಿಂದ ರಕ್ಷಿಸುವ ಗುರುತರ ಜವಾಬ್ದಾರಿ ಗೂಡಿನ ಬಳಿ ಉಳಿಯುವ ಕಾವಲು ಹಕ್ಕಿಯದಾಗಿರುತ್ತದೆ. ಹುಟ್ಟಿದ ಮರಿಗಳೆಲ್ಲ ಉಳಿಯುವುದಿಲ್ಲ. ಆದರೆ ಬದುಕಿ ಉಳಿಯುವ ಮರಿಗಳು ಅಂಟಾರ್ಕ್‌ಟಿಕಾದ—ದಕ್ಷಿಣ ಧ್ರುವ—ಅಸಹನೀಯವಾದ ಚಳಿಯಲ್ಲಿ ಕಲ್ಪಿಸಿಕೊಳ್ಳಲೂ ಆಗದಂತಹ ಪ್ರದೇಶದಲ್ಲಿ—ಪರಿಸ್ಥಿತಿಯಲ್ಲಿ ಬೆಳೆದು ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತ ಅಪ್ಪ-ಅಮ್ಮನ ಸುರಕ್ಷಿತ ಗೂಡುಗಳಿಂದ ಹೊರಬಂದು ಬೆಳಕನ್ನು ಕಾಣುತ್ತವೆ.

ಒಂಬತ್ತು ತಿಂಗಳ ಸುದೀರ್ಘವೂ ಘೋರವೂ ಆದ ಚಳಿಗಾಲದಲ್ಲಿ ಮೊಟ್ಟೆಗೆ ಕಾವು ಕೊಡುವ, ಮತ್ತು ಅದನ್ನು ರಕ್ಷಿಸುವ, ಉದ್ದೇಶಸಾಧನೆಗಾಗಿ ಅವು ಹಲವಾರು ತಿಂಗಳು ಆಹಾರವಿಲ್ಲದೆ ಕಳೆಯಬೇಕಾಗುತ್ತದೆ. ಮೊಟ್ಟೆಯೊಡೆದು ಮರಿ ಹೊರಬಂದ ಮೇಲೆ ಉಪವಾಸದ ನಿತ್ರಾಣದಲ್ಲಿಯೂ ಕಂದನಿಗೆ ಆಹಾರ ತರಲು ಮತ್ತೆ ಸಾಗರದವರೆಗಿನ ಪಾದಯಾತ್ರೆ ಆರಂಭ ವಾಗುತ್ತದೆ. ಇವೆಲ್ಲ ಅವಸ್ಥೆಗಳಿಗಿಂತ ಸಾಕ್ಷ್ಯಚಿತ್ರದ ಮುಕ್ತಾಯದ ದೃಶ್ಯವಂತೂ ನನ್ನನ್ನು ಮೂಕವಿಸ್ಮಿತಳನ್ನಾಗಿ ಮಾಡಿತು.

ಪುಟ್ಟ ಮರಿ ತನ್ನನ್ನು ತಾನು ರಕ್ಷಿಸಿಕೊಳ್ಳುವಷ್ಟು, ಜಗತ್ತನ್ನೂ ಜೀವನವನ್ನೂ ಈಗ ಸ್ವತಂತ್ರವಾಗಿ ಎದುರಿಸುವಷ್ಟು ಸಮರ್ಥವಾಗಿ ಬೆಳೆದಿದೆ ಎಂದು ಖಚಿತವಾದ ನಂತರ ಅಪ್ಪ-ಅಮ್ಮ ಮತ್ತು ಮರಿಗಳ ದಾರಿ ಬೇರೆಯಾಗುವ ಕಾಲ ಬರುತ್ತದೆ. ಅದುವರೆಗೂ ತಮ್ಮ ಪ್ರಾಣವನ್ನೇ ಪಣವಾಗಿರಿಸಿ, ರಕ್ಷಿಸಿ ಪೋಷಿಸಿದ ತಮ್ಮ ಕಂದಮ್ಮಗಳನ್ನು ಬಿಟ್ಟು ತಾಯಿ-ತಂದೆ ಪೆಂಗ್ವಿನ್‌ಗಳು ಕಡಲಿನ ಕೊರೆವ ನೀರಿಗೆ ಈಜುಬಿದ್ದು ಒಮ್ಮೆಯೂ ಹಿಂತಿರುಗಿ ನೋಡದೆ, ಮುಂದೆಂದೂ ಸಂಧಿಸದಂತಹ ಅಗಲುವಿಕೆಯನ್ನು ಒಪ್ಪಿಕೊಂಡು, ತಮ್ಮ ದಾರಿ ಹಿಡಿಯುತ್ತವೆ. ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸಿ ತಮ್ಮ ಮೂಲ ನೆಲೆಗೆ ಸಹಜವಾಗಿ ಹೊರಟುಹೋಗುತ್ತವೆ. ಅಗಲಿ ಹೋಗುತ್ತಿರುವ ಅಪ್ಪ-ಅಮ್ಮಂದಿರನ್ನು ದಡದಲ್ಲಿ ನಿಸ್ಸಹಾಯಕವಾಗಿ ಕ್ಷಣ ಕಾಲ ನಿಂತು ನೋಡುವ ಮರಿಗಳು ಮರುಕ್ಷಣವೇ ತಮ್ಮಷ್ಟಕ್ಕೆ ತಾವೂ ತಣ್ಣಗೆ ಕೊರೆವ ನೀರಿಗೆ ಧುಮುಕಿ ತಮ್ಮ ದಾರಿ ಹಿಡಿಯುತ್ತವೆ. ಸಹಸ್ರಾರು ವರ್ಷಗಳಿಂದ ನಡೆದು ಬಂದಿರುವ ಈ ಜೀವನಚಕ್ರ ಹೀಗೇ ಮುಂದುವರಿಯುತ್ತ ಬಂದಿದೆ.

ಮಾನವರಾದ ನಮಗೆ ಈ ಬಗೆಯ ನಿಃಸ್ವಾರ್ಥ-ನಿಷ್ಕಾಮ ಕರ್ಮದ ಶ್ರದ್ಧೆ ಸಾಧ್ಯವೇ ಎಂದೆನಿಸುತ್ತದೆ. ಪ್ರಕೃತಿಯೆ ಅತ್ಯುತ್ತಮ ಗುರು ಎನ್ನುತ್ತಾರೆ. ಭಗವದ್ಗೀತೆಯಲ್ಲಿ ವಿವರವಾಗಿ ವರ್ಣಿತವಾದ ನಿಷ್ಕಾಮ ಕರ್ಮದ ದರ್ಶನ ನಮಗೆ ಈ ಸಾಕ್ಷ್ಯ ಚಿತ್ರದಲ್ಲಿ ದೊರೆಯಿತು. ಪ್ರಾಯಶಃ ನನ್ನ ಭಾವುಕ ಮನಸ್ಸು ಈ ಬಗೆಯ ರಮ್ಯ ರೂಪಕಗಳಲ್ಲಿ ಕಂಡಿರುವ ಇದೆಲ್ಲ ಅವಾಸ್ತವವೂ ಆಗಿರಬಹುದು.

ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ಈ ಅದ್ಭುತ ಜೀವಿಗಳು ನ್ಯಾಷನಲ್ ಜಿಯೊಗ್ರಫಿಕ್‌ನ ಸೋಜಿಗಗಳಷ್ಟೆ ಅಲ್ಲ, ನಮ್ಮ ಪವಿತ್ರ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಅತ್ಯಂತ ಕ್ಲಿಷ್ಟವೂ, ಅಮೂರ್ತವೂ ಆದ ತತ್ತ್ವಗಳನ್ನು ತಮ್ಮ ಸಹಜವಾದ ಜೀವನ ಶೈಲಿಯಿಂದಲೆ ಬಹು ಸರಳವಾಗಿ ಮತ್ತು ಹೃದ್ಯವಾಗಿ ಮನವರಿಕೆ ಮಾಡಿಕೊಡುವ ಗುರುಗಳೂ ಆಗಿವೆ.

## ಪ್ರಹಸನ ಪ್ರಸಂಗ

**ಚಲನಚಿತ್ರ ನಿರ್ದೇಶಕ** ಈಗ ಈ ಬೆಟ್ಟದ ತುದಿಯಿಂದ ನೀವು ಕೆಳಗೆ ಧುಮುಕಬೇಕು.

**ಗಾಬರಿಗೊಂಡ ನಟ** : ಆಗಲಿ, ಆದರೆ ಹಾಗೆ ಹಾರಿದಾಗ ಅನಾಹುತವಾಗಿ ನಾನು ಸತ್ತರೆ ಅಥವಾ ಗಾಯಗೊಂಡರೆ..

**ನಿರ್ದೇಶಕ** : ಅಯ್ಯೋ, ಯಾಕೆ ಚಿಂತೆ? ಇದೇ ಕಡೆಯ ಸೀನ್ ಕಣ್ರೀ!

❂❂❂

ಪಾದ್ರಿಯೊಬ್ಬರು ತಮ್ಮ ಭಾನುವಾರದ ಧರ್ಮೋಪದೇಶವನ್ನು ಮುಗಿಸಿ ಮನೆಗೆ ತಮ್ಮ ಕಾರಿನಲ್ಲಿ ಹಿಂದಿರುಗುತ್ತಿದ್ದಾಗ ರಸ್ತೆಯ ಬಳಿ ಇದ್ದ ಕಂಬಿಗಳಿಗೆ ಗಾಡಿ ಉಜ್ಜಿ, ಒಂದು ಕಡೆ ಸಂಪೂರ್ಣವಾಗಿ ಹಾಳಾಗಿತ್ತು. ಮನೆಗೆ ಬಂದೊಡನೆ ಅವನ ಸ್ನೇಹಿತ ಕೇಳಿದ, "ನೀನು ಹೊರಟಾಗ ನಿನಗೆ ಮಂಪರು ಬರುವಂತೆ ಇತ್ತೇ?" ಈತ ಹೇಳಿದ, "ಇಲ್ಲ, ಎಚ್ಚರದಿಂದಲೇ ಇದ್ದೆ. ನಾನು ಪ್ರವಚನದಲ್ಲಿ ಹೇಳಿದ್ದ ವಿಚಾರಗಳನ್ನು ಮತ್ತೆ ನೆನಪಿಸಿಕೊಳ್ಳುತ್ತಿದ್ದೆ ಅಷ್ಟೆ..."

❂❂❂

ತೊಂಬತ್ತೈದು ವರ್ಷಗಳ ವೃದ್ಧರೊಬ್ಬರು ತಮ್ಮ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಹಿತೈಷಿಗಳನೇಕರು ಉಡುಗೊರೆಗಳೊಂದಿಗೆ ಬಂದಿದ್ದರು. ಎಲ್ಲರನ್ನೂ ಬರಮಾಡಿಕೊಂಡು ಆತ ಹೇಳಿದ, "ನೋಡಿ, ನನಗೆ ಯಾರೂ ಶತ್ರುಗಳೇ ಇಲ್ಲ. ಇಡೀ ಜಗತ್ತಿನಲ್ಲೇ ಇಲ್ಲ!" ಬಂದಿದ್ದವರು, "ಆಹಾ! ಎಂತಹ ಅದ್ಭುತ ಸಾಧನೆ! ಅದ್ಹೇಗೆ ಸಾಧ್ಯವಾಯಿತು?" ಎಂದು ಆಶ್ಚರ್ಯದಿಂದ ಕೇಳಿದರು. ಈತ ಶಾಂತವಾಗಿ ಹೇಳಿದ, "ಏನಿಲ್ಲ, ಅವರೆಲ್ಲ ಈಗಾಗಲೇ ತೀರಿಕೊಂಡಿದ್ದಾರೆ!"

❂❂❂

ಅಂಗಡಿಯಲ್ಲಿ ದಿನಸಿ ಪದಾರ್ಥಗಳನ್ನು ಕೊಂಡುಕೊಂಡ ನಂತರ ಹಣ ಪಾವತಿ ಮಾಡುವ ಸ್ಥಳದಲ್ಲಿದ್ದ ವ್ಯಕ್ತಿ ಒಂದು ಕೈಯಲ್ಲಿ ಪ್ಲಾಸ್ಟಿಕ್ ಚೀಲವನ್ನು ಹಿಡಿದಿದ್ದ. ಮತ್ತೊಂದು ಕೈಯಲ್ಲಿ ಪೇಪರಿನ ಚೀಲವನ್ನು ಹಿಡಿದಿದ್ದ. ಪದಾರ್ಥಗಳನ್ನು ತುಂಬಿಕೊಳ್ಳಲು ಅವುಗಳನ್ನು ಮುಂದೆ ನೀಡಿ ಹೇಳಿದ, "ಪ್ಲಾಸ್ಟಿಕ್ ಬಳಸಿದರೆ ಅದು ನದಿ, ಸಮುದ್ರವನ್ನು ಸೇರಿ ಮೀನುಗಳು ಉಸಿರುಗಟ್ಟಿ ಸಾಯುವುವು. ಪೇಪರ್ ಉಪಯೋಗಿಸಿದರೆ ಮರಗಿಡಗಳು ಸಾಯುವುವು. ಯಾವುದನ್ನು ಸಾಯಿಸಲು ಬಯಸುವಿರಿ?"